**ಪಿಡಬ್ಲೂ-1**

**ಸಾಕ್ಷಿಯನ್ನು ದಿನಾಂಕಃ 18-07-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟಿ ಸವಾಲುಃ ವಾದಿ ಪರ ಶ್ರೀ ಬಿ ಕೆ ಡಿ ವಕೀಲರಿಂದ.**

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ಬ್ಯಾಂಕ ಸ್ಟೆಟಮೆಂಟ ಎಸ್.ಬಿ.ಐ ಬ್ಯಾಂಕಿನ ಸ್ಟೆಟಮೆಂಟ ಇರುತ್ತದೆ. ನನ್ನ ಚೆಕ್ಕು ಕರ್ನಾಟಕ ಬ್ಯಾಂಕಿನ ಚೆಕ್ಕ ಇರುತ್ತದೆ. ಖರೀದಿ ಪತ್ರ ದಿನಾಂಕಃ 01-03-2021 ರಂದು ಪ್ರತಿವಾದಿ ಬರೆದುಕೊಟ್ಟಿರುತ್ತಾನೆ. ಖರೀದಿ ಪತ್ರ ಬರೆಯುವ ಸಮಯದಲ್ಲಿ ರೂ.23,00,000/- ಮುಟ್ಟಿರುತ್ತದೆ ಎಂದು ಖರೀದಿ ಪತ್ರದಲ್ಲಿ ಬರೆಸಿರುವುದು ನಿಜ ಇರುತ್ತದೆ. ಆ ಸಮಯದಲ್ಲಿ ಸದರಿ ಹಣ ಜಮಾ ಆಗಿತ್ತಾ ಎಂದು ಕೇಳಲು ಸಾಕ್ಷಿಯು ಅದೆ ದಿನ ನಾನು ಚೆಕ್ಕನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಅದೆ ದಿನ ಚೆಕ್ಕನ್ನು ಕೊಟ್ಟಿರುತ್ತೇನೆ ಎಂದು ಖರೀದಿ ಪತ್ರದಲ್ಲಿ ನಮೂದಿಸಿರುವುದಿಲ್ಲ. ಖರೀದಿ ಕರಾರು ಪತ್ರ ತಯಾರಾಗುವ ದಿನ ನಾನು ರೂ.23,00,000/- ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಮತ್ತು ಆಸ್ತಿಯನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.